# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂಅಪ್ರಾ/ನಮ/ಅಸ/ಅಅ-2/ತಾಸ-3/ಉ/ 02 /2024-25
No.

ದಿನಾಂಕ : 30.05.2024
Date :

ಬೆಂಗಳೂರು
ಅನುಸೂಚಿ-ಎ 5
(ಉಪವಿಧಿ ಸಂಖ್ಯೆ: 4.1)

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

## ಮಾರ್ಪಾಡಿತ ನಕ್ಷೆ ಮಂಜೂರಾತಿ ಪತ್ರ

ಇವರಿಗೆ,

ಶ್ರೀ ಮಾದವ ಬಡಷೇಶಿ,
ನಂ. 333, ನೋವಾ ಮಿಲ್ಲರ್,
2ನೇ ಮಹಡಿ, ತಿಮ್ಮಯ್ಯ ರಸ್ತೆ,
ಬೆಂಗಳೂರು - 560 020.

ಮಾನ್ಯರೆ,

ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಅವಲಹಳ್ಳಿ ಗ್ರಾಮದ ಸರ್ವೆ ನಂ. 26/1, 27/1, 27/2, 27/3ಎ, 27/3ಬಿ ರಲ್ಲಿ ನಿರ್ಮಿಸಲು ಉದ್ದೇಶಿಸಿರುವ 3BF+GF+18UF+TF ಅಂತಸ್ತು ಹೊಂದಿರುವ ಒಟ್ಟು 247 ವಸತಿ ಘಟಕಗಳನ್ನೊಳಗೊಂಡ ಬಹುವಸತಿ (ನೆಲ ಮತ್ತು 1ನೇ ಮಹಡಿಯ ಭಾಗಶಃ ಪ್ರದೇಶದಲ್ಲಿ ಅಮೆನಿಟಿ ಒಳಗೊಂಡಂತೆ) ಕಟ್ಟಡವನ್ನು ನಿರ್ಮಾಣ ಮಾಡಲು ಪ್ರಾಧಿಕಾರಕ್ಕೆ ದಿನಾಂಕ: 15.05.2023 ರಂದು ಅರ್ಜಿ ಸಲ್ಲಿಸಿ ಮಾರ್ಪಾಡಿತ ನಕ್ಷೆ ಮಂಜೂರಾತಿ ನೀಡಲು ಕೋರಿರುತ್ತೀರಿ. ಈ ಸಂಬಂಧ ಮಾನ್ಯ ಆಯುಕ್ತರವರು ಆದೇಶ ದಿನಾಂಕ: 06.05.2024 ರಂದು ಮಾರ್ಪಾಡಿತ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿದ್ದು, ಅದರಂತೆ, ನಿರ್ಮಾಣದಾರರು ಚಲನ್ ನಂ. GN24052080, ದಿನಾಂಕ: 24.05.2024 ರಂದು ಒಟ್ಟು ರೂ. 79,34,929/- ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಅದರಂತೆ, ದಿನಾಂಕ: 30.05.2024 ರಲ್ಲಿ ಮಾರ್ಪಾಡಿತ ನಕ್ಷೆ ಮಂಜೂರಾತಿ ನೀಡಿದ್ದು, ಸದರಿ ಮಂಜೂರಾತಿಯು ದಿನಾಂಕ: 30.05.2024 ರಿಂದ 29.05.2026 ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ಮಂಜೂರಾತಿ ಮಾಡಲಾಗಿದೆ ಎಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ.

### ಪಾಲಿಸಬೇಕಾದ ಷರತ್ತುಗಳು

1) ಪ್ರಾಧಿಕಾರದ ನಗರ ಯೋಜನಾ ವಿಭಾಗದಿಂದ ಕರಡು ನಕ್ಷೆ ಅನುಮೋದನೆ ಸಮಯದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸುವುದು.
2) KSPCB ಸಂಸ್ಥೆ ರವರಿಂದ CFE ಪತ್ರ ಪಡೆದು ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಮನವಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.
3) ಅಗ್ನಿಶಾಮಕ ಇಲಾಖೆಯಿಂದ Revised NOC ಅನ್ನು ಪಡೆದು ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಮನವಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.
4) SEIAA ಸಂಸ್ಥೆಯಿಂದ Corrigendum NOC ಅನ್ನು ಪಡೆದು ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಮನವಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು


ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020. ದೂರವಾಣಿ : 080-23443075, 23445005
T. Chowdaiah Road, Kumarapark West, Bangalore - 560 020, Telephone : 080 - 23443075, 23445005

5) ಸ್ಥಳೀಯ ಗ್ರಾಮ ಪಂಚಾಯಿತಿ ರವರಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುಮತಿ ಪತ್ರ ಪಡೆದು ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಮನವಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.

6) Airport Authority of India ರವರು ದಿನಾಂಕ: 25.09.2023 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

7) ದಿನಾಂಕ: 31.01.2024 ರಂದು BESCOM ವತಿಯಿಂದ ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

8) ನಕ್ಷೆಯಲ್ಲಿ ವಿವಿಧ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ.

9) ಅಭಿವೃದ್ಧಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಪಡಿಸಲಾಗುವುದು.

10) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಬಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

11) ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ ಬಿಡಿಎ / ಬಿಬಿಎಂಪಿ / ನಗರ ಸಭೆ / ಪಂಚಾಯತ್ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

12) ಮಳೆ ನೀರು ಕೊಯ್ಲನ್ನು ಬೆಂಗಳೂರು ಜಲಮಂಡಳಿ ರವರು ನಿಗಧಿಪಡಿಸಿರುವಂತೆ ಕಡ್ಡಾಯವಾಗಿ ಅಳವಡಿಸುವುದು.

13) ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು.

14) ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (S.T.P) ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ಯುಕ್ತ ತ್ಯಾಜ್ಯ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದಲ್ಲ.

15) ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

16) ಅಭಿವೃದ್ಧಿದಾರರು ಕಟ್ಟಡಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

17) ಸದರಿ ಕಟ್ಟಡವನ್ನು ಪ್ರಾರಂಭಿಸುವ ಮೊದಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಹಾಗೂ ಪೂರ್ಣಗೊಂಡ ಕಟ್ಟಡವನ್ನು ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ಸ್ವಾಧೀನಾನುಭವ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

18) ಅಭಿವೃದ್ಧಿದಾರರು ಟ್ರಾನ್ಸ್ ಫಾರ್ಮರ್ ಗಾಗಿ ಗುರುತಿಸಿರುವ ಪ್ರದೇಶದಲ್ಲಿ ಅಳವಡಿಸತಕ್ಕದ್ದು.

19) ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

20) ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ, ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಸಂಪೂರ್ಣವಾಗಿ ಜವಬ್ದಾರರಾಗಿರತಕ್ಕದ್ದು. ಈ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾದ್ದಾರಿಯನ್ನು ಹೊಂದಿರುವುದಿಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾರ್ಮಿಕರು ಹಾಗೂ ನಿರ್ಮಾಣದ ಬಗ್ಗೆ ಸೂಕ್ತ ಸುರಕ್ಷತಾಮತ್ತು ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು, ನಿರ್ಮಾಣ ಸಮಯದಲ್ಲಿ ಯಾವುದೇ ತರಹದ ಅನಾಹುತ ಅಥವಾ ಪ್ರಾಣ ಹಾನಿಯಾಗದಂತೆ ಕಟ್ಟುನಿಟ್ಟಿನ ಎಚ್ಚರವಹಿಸತಕ್ಕದ್ದು, ಯಾವುದೇ ತರಹದ ಅನಾಹುತಕ್ಕೆ ಗುತ್ತಿಗೆ ಪಡೆದ ನಿರ್ಮಾಣದಾರರು ನೇರ ಜವಬ್ದಾರರಾಗಿರುತ್ತಾರೆ. ಅಂತಹ ಪ್ರಸಂಗ ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸುವುದಲ್ಲದೆ ನೀಡಲಾಗಿರುವ ಮಂಜೂರಾತಿಯು ತಂತಾನೆ ರದ್ದಾಗುತ್ತದೆ.

21) ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

Next Page...

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

22) ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

23) ಕಟ್ಟಡ ನಿರ್ಮಾಣ ಸಮಯದಲ್ಲಿ ಸೆಂಟರಿಂಗ್ ಅಥವಾ ಇನ್ನಿತರೇ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದ್ದಲ್ಲಿ ಅದಕ್ಕೆ ಅಭಿವೃದ್ಧಿದಾರರೇ ಜವಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರು ಮಾಡಿದ ಯಾವುದೇ ಇಲಾಖೆ / ಸಂಸ್ಥೆಯು ಜವಬ್ದಾರರಾಗಿರುವುದಿಲ್ಲ.

24) ಅಭಿವೃದ್ಧಿದಾರರು ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ / ದಾಖಲಾತಿ ನೀಡಿದ್ದಲ್ಲಿ ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ನಕ್ಷೆ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮಕೈಗೊಳ್ಳಲಾಗುವುದು.

25) ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅಥವಾ ಸ್ಥಳೀಯ ಸಂಸ್ಥೆಯನ್ನು ಅವಲಂಭಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

26) ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C & D/ 2016/5392/2020-21, ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೇ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸುವುದು.

27) SEIAA ನಿಯಮಗಳನ್ವಯ ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ಶೇ 25% ರಷ್ಟು ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

28) FAR ವಿಸ್ತೀರ್ಣದ ಪ್ರತಿ 240 ಮೀ ಗೆ ಒಂದರಂತೆ ಗಿಡವನ್ನು ನೆಟ್ಟು ಪೋಷಿಸುವುದು ಕಡ್ಡಾಯವಾಗಿದೆ.

29) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರಗಳು ಪ್ರಸ್ತಾಪಿಸಿರುವ ರಸ್ತೆಗಳ ಪಂಕ್ತೀಕರಣಗಳ ಪ್ರಶ್ನಿತ ಜಮೀನುಗಳಲ್ಲಿ ಇದ್ದಲ್ಲಿ ಸಾರ್ವಜನಿಕ ರಸ್ತೆಗಾಗಿ ಜಾಗವನ್ನು ಮಫತ್ತಾಗಿ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

30) ಪ್ರಶ್ನಿತ ಜಮೀನಿನಲ್ಲಿ RMP- ರಸ್ತೆ / RR / SH / NH ಇತ್ಯಾದಿ ಇದ್ದಲ್ಲಿ ರಸ್ತೆ ಪಂಕ್ತೀಕರಣದಲ್ಲಿ ಬರುವ ಜಮೀನನ್ನು ಪ್ರಾಧಿಕಾರಕ್ಕೆ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಮುಫತ್ತಾಗಿ ಹಸ್ತಾಂತರಿಸಬೇಕು ಹಾಗು ವಿನ್ಯಾಸ ನಕ್ಷೆ ಅನುಮೋದನೆ ಸಂದರ್ಭದಲ್ಲಿ ರಸ್ತೆ ಮಾರ್ಜಿನ್ ಅನ್ನು ಕಡ್ಡಾಯವಾಗಿ ಬಿಡತಕ್ಕದ್ದು.

31) ಈ ಹಿಂದೆ ಮಂಜೂರಾದ ನಕ್ಷೆ ಸಂಖ್ಯೆ: ಬೆಂಅಪ್ರಾ/ನಮ/ಅಸ/ಅಅ-2/ತಾಸ-3/ಉ/26/2018-19, ದಿನಾಂಕ: 28.02.2019 ಅನ್ನು ರದ್ದುಪಡಿಸಿದೆ.

32) ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು / ಸರ್ಕಾರವು / ನ್ಯಾಯಾಲಯವು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

33) ಪ್ರಸ್ತುತ ಚಾಲ್ತಿಯಲ್ಲಿರುವ ಮತ್ತು ಅನ್ವಯವಾಗುವ ಎಲ್ಲಾ ಕಾಯ್ದೆ / ನಿಯಮಗಳನ್ನು ಕಟ್ಟಡ ನಿರ್ಮಾಣ ಸಮಯದಲ್ಲಿ ಕಡ್ಡಾಯವಾಗಿ ಪಾಲಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರು (ಉತ್ತರ), ಬೆಂ.ಅ.ಪ್ರಾ. ಬೆಂಗಳೂರು ರವರ ಮಾಹಿತಿಗಾಗಿ.

housiey.com